**ಚಾಸಾಃ 16  ಪ್ರಾಸಾಃ 8**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ:201/2025**

| | |
|---|---|
| ಹೆಸರು | :ಸರಸ್ವತಿ ಬಿ.ಟಿ |
| ಗಂಡನ ಹೆಸರು | :ಚತುರ್ಮುಖ |
| ಪ್ರಾಯ | :33 ವರ್ಷ |
| ಉದ್ಯೋಗ | :ಪಿ.ಎಸ್.ಐ, ಸುಳ್ಯ |
| ವಾಸ | :ಸುಳ್ಯ |

**ದಿನಾಂಕ 03.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿಃ 7.7.2023 ರಿಂದ ಸುಳ್ಯ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.20.12.2024 ರಂದು ಚಾಸಾ–15 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಮಳಿಗೆ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್ ರವರಿಂದ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡಿದ್ದ ಮದ್ಯದ ಸ್ಯಾಚೆಟ್ ಗಳು ಸುಳ್ಯದ ಪ್ರಕಾಶ್ ವೈನ್ಸ್ ರವರಿಗೆ ಹಂಚಿಕೆಯಾಗಿದ್ದ ಬಗ್ಗೆ ದೃಢೀಕರಣವನ್ನು ಪಡೆದುಕೊಂಡು ಅದನ್ನು ತನಿಖೆಗೆ ಅಳವಡಿಸಿಕೊಂಡಿರುತ್ತೇನೆ. ದಿ. 29.1.2025 ರಂದು ಎಫ್.ಎಸ್.ಎಲ್ ವರದಿ ಮತ್ತು ಮುದ್ದೆಮಾಲುಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಚಾಸಾ-11 ರವರಿಂದ ಪಡೆದುಕೊಂಡ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-15(ಸಿ) ಮತ್ತು 15(ಡಿ) ಎಂದು ಗುರುತಿಸಲಾಯಿತು. ಆರ್.ಎಫ್.ಎಸ್.ಎಲ್ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಸ್ಯಾಂಪಲ್ ಸೀಲನ್ನು ನೋಡುತ್ತಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಎಫ್.ಎಸ್.ಎಲ್ ನಿಂದ ಸ್ವೀಕರಿಸಿಕೊಂಡ ಮುದ್ದೆ ಮಾಲುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಎಂ.ಒ.1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ನಿಪಿ-15 ರಲ್ಲಿ ಮೈಸೂರು ಲ್ಯಾನ್ಸರ್ ಡಿಲಕ್ಸ್ ಕ್ವಾಲಿಟಿ ವಿಸ್ಕಿ aspetic brick packet 90 ಎಂ.ಎಲ್ ಎಂದು ನಮೂದಾಗಿದೆ ಎಂದರೆ ಸರಿ. ಚಾಸಾ-1 ರವರು ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡಿರುವುದು ಟೆಟ್ರಾ ಪ್ಯಾಕೆಟ್ ಎಂದರೆ ಸರಿ. ಸಾಕ್ಷಿ ಮುಂದುವರಿದು ಚಾಸಾ-11 ರವರು ನೀಡಿರುವ ವರದಿಯಲ್ಲಿಯೂ ಸಹ ಟೆಟ್ರಾ ಪ್ಯಾಕೆಟ್ ಎಂದು ನಮೂದು ಮಾಡಿರುತ್ತಾರೆ. ಟೆಟ್ರಾ ಪ್ಯಾಕೆಟ್ ಮತ್ತು aspetic brick packet ಎರಡೂ ಬೇರೆ ಬೇರೆ ಎಂದರೆ ಸರಿಯಲ್ಲ. ಆ ಎರಡು ಪ್ಯಾಕೆಟ್ ಗಳು ಒಂದೇ ಎಂಬ ಬಗ್ಗೆ ಸಂಬಂಧ ಪಟ್ಟವರಿಂದ ವರದಿ ಪಡೆದುಕೊಂಡಿರುವುದಿಲ್ಲ. ಮುದ್ದೆ ಮಾಲುಗಳನ್ನು ಜಪ್ತಿ ಪಡಿಸಿಕೊಂಡ ಸ್ಥಳ ಯಾರಿಗೆ ಸೇರಿದ್ದು ಎಂಬ ಬಗ್ಗೆ ಹಿಂದಿನ ತನಿಖಾಧಿಕಾರಿಗಳು ತನಿಖೆ ಮಾಡಿರುತ್ತಾರೆ. ಸದರಿ ಸ್ಥಳ ಆರೋಪಿತನಿಗೆ ಸೇರಿದ್ದು ಎಂಬ ಬಗ್ಗೆ ಹಿಂದಿನ ತನಿಖಾಧಿಕಾರಿಗಳು ದಾಖಲೆಯನ್ನು ಪಡೆದುಕೊಂಡಿರುತ್ತಾರೆ. ಘಟನೆ ಕಾಲಕ್ಕೆ ಯಾವುದೇ ಚುನಾವಣಾ ಪ್ರಕ್ರಿಯೆಗಳು ಇರಲಿಲ್ಲ ಎಂದರೆ ನನಗೆ ನೆನಪಿಲ್ಲ. ಆ ಸಮಯದಲ್ಲಿ ಗ್ರಾಮ ಪಂಚಾಯತ್ ಚುನಾವಣೆಗಳು ಇದ್ದಿರಬಹುದು. ನಿಪಿ-4 ರಲ್ಲಿ ವೈನ್‌ಶಾಪ್ ಮಾಲೀಕರ ವಿರುದ್ಧ ಸಹ ದೂರು ನೀಡಿದ್ದು ಈ ಬಗ್ಗೆ ನನ್ನ ಹಿಂದಿನ ತನಿಖಾಧಿಕಾರಿಗಳು ವೈನ್‌ಶಾಪ್ ನ ಮಾಲೀಕರನ್ನು ವಿಚಾರಣೆ ಮಾಡಿ ಹೇಳಿಕೆ

ಪಡೆದುಕೊಂಡಿದ್ದು, ವೈನ್‌ಶಾಪ್ ಮಾಲೀಕರ ಹೇಳಿಕೆಯ ಪ್ರಕಾರ ಎಲ್ಲಾ ಮದ್ಯದ ಸ್ಯಾಚೆಟ್ ಗಳನ್ನು ಒಂದೇ ಸಲ ಆರೋಪಿತನಿಗೆ ಮಾರಾಟ ಮಾಡದೇ ಎರಡು ಸಲ ಮಾರಾಟ ಮಾಡಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಆ ಕಾರಣಕ್ಕೆ ವೈನ್ ಶಾಪ್ ಮಾಲೀಕರ ವಿರುದ್ದ ಕ್ರಮ ತೆಗೆದುಕೊಂಡಿರುವುದಿಲ್ಲ. ವೈನ್ ಶಾಪ್ ಮಾಲೀಕರು ಆ ರೀತಿ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮಧ್ಯ ಖರೀದಿ ಮಾಡಿದ ಪ್ರಕಾಶ್ ವೈನ್‌ಶಾಪ್ ಗೆ ಮಧ್ಯ ಮಾರಾಟಕ್ಕೆ ಲೈಸೆನ್ಸ್ ನೀಡಿದ್ದಾಗಿರುತ್ತದೆ. ಆ ಬಗ್ಗೆ ಲೈಸೆನ್ಸ್ ಅನ್ನು ಪಡೆದುಕೊಂಡಿರುತ್ತೇವೆ. ಸದರಿ ಲೈಸೆನ್ಸ್ ಪ್ರಕಾರ ಮಧ್ಯ ಮಾರಾಟಕ್ಕೆ ಮಾತ್ರ ಲೈಸೆನ್ಸ್ ನೀಡಿರುತ್ತಾರೆ. ಅದರಲ್ಲಿ ಯಾವ ಮಾದರಿಯ ಲೈಸೆನ್ಸ್ ಎಂದು ನಮೂದಾಗಿರುವುದಿಲ್ಲ. ಆದರೆ CL ಎಂದು ಮಾತ್ರ ನಮೂದಾಗಿರುತ್ತದೆ.

ಆರೋಪಿ ಪ್ರಕಾಶ್ ವೈನ್ಸ್ ನಿಂದ ಎರಡು ಸಲ ಮಧ್ಯ ಖರೀದಿ ಮಡಿದ ಬಗ್ಗೆ ರಶೀದಿಗಳನ್ನು ಪಡೆದುಕೊಂಡಿರುವುದಿಲ್ಲ. ವೈನ್ ಶಾಪ್ ಮಾಲೀಕರ ಹೇಳಿಕೆಯನ್ನು ಪ್ರಕರಣಕ್ಕಾಗಿ ಮತ್ತು ವೈನ್ ಶಾಪ್ ಮಾಲೀಕರ ರಕ್ಷಣೆಗಾಗಿ ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಸುಳ್ಯ ಪ್ರಕಾಶ್ ವೈನ್ಸ್ ಗೆ 90 ಎಂ.ಎಲ್ ಟೆಟ್ರಾ ಪ್ಯಾಕೆಟ್ ಗಳು ಸಪ್ಲೈ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಹಿಂದಿನ ತನಿಖಾಧಿಕಾರಿಗಳಿಂದ ಪಡೆದುಕೊಂಡ ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಯಾಂತ್ರಿಕವಾಗಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ತಿಳಿಸಿದ ಹಾಗೆ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ